# ಚೈತನ್ಯದ ಚಿಲುಮೆ

ಪೂನಿ ಅಜ್ಜಿ ಮನೆಯಲ್ಲಿ ಪಿಂಕಿಗೆ ಆಡಲು ಅಶ್ವಿನಿ, ಭರಣಿಯರ ಜೊತೆ ದೊರೆಯಿತು. ಮೂವರು ಪುಟಾಣಿಗಳು ಅಜ್ಜ–ಅಜ್ಜಿಯನ್ನು ಏನೆಲ್ಲ ಗೋಳು ಹೊಯ್ದುಕೊಂಡರು ಗೊತ್ತೇ? ಉಹುಂ, ಅದು ಗೋಳಾಟವಲ್ಲ... ಮಕ್ಕಳ ಲೋಕದಲ್ಲಿ ಹಿರಿಯರೂ ಮಕ್ಕಳಾದ ವಿಶಿಷ್ಟ ಅನುಭವ.

■ ಜಿ.ವಿ. ಅರುಣ
ಕಲೆ: ಭಾವು ಪತ್ತಾರ್

ಪೂನಿ ನನಗೆ ನರ್ಸರಿಯಿಂದ ಗೆಳತಿ; ಪ್ರತಿದಿನ ಮೊಬೈಲಿನಲ್ಲಿ ಮಾತನಾಡುತ್ತಿದ್ದರೂ ನೋಡಬೇಕು ಎನ್ನಿಸಿದಾಗಲೆಲ್ಲ ಇನ್ನೊಬ್ಬರ ಮುಂದೆ ಪ್ರತ್ಯಕ್ಷವಾಗಿಬಿಡುತ್ತಿದ್ದೆವು. ಮೊನ್ನೆ ಅವಳು ಫೋನ್ ಮಾಡಿ 'ನಾಳೆ ಮಧ್ಯಾಹ್ನ ಕಾಫಿಯ ಹೊತ್ತಿಗೆ ಬರ್ತೀನಿ' ಅಂತ ಹೇಳಿದಳು.

'ನಿನ್ನ ಮೊಮ್ಮಗಳು ಬೇಸಿಗೆ ರಜೆಗೆ ಬಂದಿದ್ದಾಳೆ ಅಂದ್ಯಲ್ಲ, ಅವಳನ್ನು ಕರ್ಕೊಂಡು ಬಾ. ನನ್ನ ಮೊಮ್ಮಕ್ಕಳಿಗೂ ಬರಲು ಹೇಳ್ತೀನಿ. ಮೂವರು ಆಟ ಆಡಿಕೊಳ್ಳುತ್ತಾ ಇರಲಿ' – ಇದು ನನ್ನ ಪ್ರೀತಿಯ ಆಹ್ವಾನ.

'ಅಮ್ಮ, ನಾನು ನಿನ್ನ ಜೊತೆ ಮಾತಾಡೋಣ ಅಂತ ಬರ್ತೀನಿ ಅಂತ ಹೇಳಿದ್ದು. ಅವಳು ತಾತನ ಜೊತೆ ಎಲ್ಲಾದರೂ ಹೋಗಿ ಬರ್ತಾಳೆ. ಅವಳನ್ನು ಕರೆದುಕೊಂಡು ಬಂದರೆ ನಾನು ನೀನು ಮಾತಾಡಿದ ಹಾಗೇ!' ಎಂದು ಪೂನಿ ಹೇಳಿದಳು.

'ಪಾಪ, ಚಿಕ್ಕ ಹುಡುಗಿ, ನೋಡಿ ತುಂಬಾ ದಿನ ಆಗಿದೆ, ಕರ್ಕೊಂಡು ಬಾ' ಎಂದೆ.

'ಅವಳ ವಿಚಾರ ನಿನಗೆ ಗೊತ್ತಿಲ್ಲ. ನೀನೇ 'ಆ ಬೈಲ್ ಮುಝೆ ಮಾರ್' ಅಂದ್ರೆ ನಾನೇನು ಮಾಡಲಿ! ಸರಿ, ಇಬ್ಬರೂ ಬರ್ತೀವಿ' ಎಂದು ಒಪ್ಪಿಗೆ ಸೂಚಿಸಿದಳು.

ನನ್ನ ಮೊಮ್ಮಕ್ಕಳು, ಅಶ್ವಿನಿ – ಭರಣಿ ಇಬ್ಬರೂ ಅವರ ಮನೆಯಿಂದ ಬಂದು, ಪೂನಿ ಅಜ್ಜಿ ಹಾಗೂ ಅವಳ ಮೊಮ್ಮಗಳು ಪಿಂಕಿಗೆ ಕಾಯುತ್ತಿದ್ದರು. ಅವರು ಆಟೊದಿಂದ ಇಳೀತಿದ್ದ ಹಾಗೆ, ಎದುರುಗೊಳ್ಳಲು ನಿಂತಿದ್ದ ನಮ್ಮನ್ನು ನೋಡಿ ಸಡಗರದಿಂದ ಪಿಂಕಿ 'ಹಾಯ್ ಅಜ್ಜಿಆಂಟಿ, ಹೇಗಿದ್ದೀರಾ?' ಎಂದು ಕೇಳಿದಳು. ನನ್ನ ಉತ್ತರಕ್ಕೂ ಕಾಯದೆ, ಮಕ್ಕಳ ಕಡೆ ತಿರುಗಿ 'ಹಾಯ್, ನನ್ನ ಹೆಸರು ಪಿಂಕಿ. ನಿಮ್ಮ ಹೆಸರು?' ಎಂದು ನನ್ನ ಮೊಮ್ಮಕ್ಕಳ ಕೈ ಹಿಡಿದು 'ಬನ್ನಿ ಒಳಗೆ ಹೋಗೋಣ' ಅಂತ ನಮ್ಮನ್ನು ನಮ್ಮ ಮನೆಯೊಳಕ್ಕೆ ಕರೆದುಕೊಂಡು ಹೋದಳು.

ನಾನು ಖುಷಿಯಿಂದ 'ಬಹಳ ಚೂಟಿ ಕಣೇ ನಿನ್ನ ಮೊಮ್ಮಗಳು' ಎಂದು ಅಭಿಮಾನದಿಂದ ಪೂನಿ ಕಡೆ ತಿರುಗಿ ಹೇಳಿದೆ. ಅವಳು ಮುಗುಳುನಗುತ್ತಾ 'ಅಭಿ ಪಿಕ್ಚರ್ ಬಾಕಿ ಹೈ...' ಎನ್ನುತ್ತಾ ಒಳಗೆ ಬಂದಳು.

ಪಿಂಕಿ ತನ್ನ ಹೊಸ ಸ್ನೇಹಿತರಿಗೆ 'ಏನಾದ್ರೂ ಆಟ ಆಡೋಣ್ವ... ಜಡೆ ಇರೋ ಬೊಂಬೆ ಇದ್ಯಾ?' ಎಂದು ಕೇಳಿದಳು. ಅಶ್ವಿನಿ, ಭರಣಿ ಇಬ್ಬರೂ 'ಇದೆ...' ಎಂದು ಓಡಿಹೋಗಿ ಒಂದೊಂದು ಬೊಂಬೆಯನ್ನು ತಂದರು. ಜೊತೆಗೆ ಇನ್ನೊಂದಷ್ಟು ಮನೆಯಾಟದ ಸಾಮಾನುಗಳು ಬಂದವು. ಅವನ್ನೆಲ್ಲ ನೋಡಿ ಪಿಂಕಿ 'ಗುಡ್, ಬೊಂಬೆಯೆಲ್ಲ ತುಂಬಾ ಚೆನ್ನಾಗಿದೆ. ಇವತ್ತು ಈ ಎರಡು ಬೊಂಬೆಗಳ ಹುಟ್ಟಿದಹಬ್ಬ ಮಾಡೋಣ ಅಲ್ವಾ?' ಎಂದು ಕೇಳಿದಳು.

ಅವಳ ವಾರಿಗೆಯ ಇವರಿಬ್ಬರೂ ಸಂತೋಷದಿಂದ ತಲೆ ಆಡಿಸಿದರು. 'ಹಾಗಾದ್ರೆ ಇವರಿಗೆ ಇವತ್ತು ಏನು ಹೆಸರು ಇಡೋಣ?' ಎಂದಳು ಪಿಂಕಿ.

ಅಶ್ವಿನಿ ಹಾಗೂ ಭರಣಿ ಇಬ್ಬರೂ ಒಟ್ಟಿಗೆ 'ಆ ಬೊಂಬೆ ತಂದ ದಿನವೇ ಅವಕ್ಕೆ 'ಮಲ್ಲಿಗೆ – ಸಂಪಿಗೆ' ಅಂತ ಹೆಸರು ಇಟ್ಟುಬಿಟ್ಟಿದೀವಿ' ಎಂದರು.

'ಮಲ್ಲಿಗೆ, ಸಂಪಿಗೆ... ಹಿಹಿಹಿ... ಹೆಸರು ಚೆನ್ನಾಗಿದೆ. ನನ್ನ ಬೊಂಬೆಗೂ ಒಂದು ದಿನ ಈ ಹೆಸರು ಇಡ್ತೀನಿ. ನಾನು ಆಟ ಆಡುವಾಗ ನನ್ನ ಬೊಂಬೆಗೆ ಪ್ರತಿದಿನ ಒಂದು ಹೊಸ ಹೆಸರು ಇಡ್ತೀನಿ. ಆಗ ಅದು ಹೊಸ ಬೊಂಬೆ ಆಗಿಹೋಗುತ್ತೆ. ನೀವೂ ಹಾಗೆ ಮಾಡಿ. ಇವತ್ತು ಮಲ್ಲಿಗೆ, ಸಂಪಿಗೆ ಬೇಡ. ಸರಿನಾ...?' ಎಂದಾಗ ಅಶ್ವಿನಿ, ಭರಣಿ ಸಂತೋಷದಿಂದ ಒಪ್ಪಿ ತಲೆ ಆಡಿಸಿದರು.

'ಹಾಗಾದ್ರೆ ಏನು ಹೆಸರು ಇಡೋಣ...?' ಪಿಂಕಿ ಕೇಳಿದಳು.

'ನೀನೇ ಇಟ್ಟುಬಿಡು.'

'ಸರಿ, ಇವಳಿಗೆ 'ಕರಿಜಡೆ', ಅವಳಿಗೆ 'ಬಿಳಿಜಡೆ'

